# ಪರಾ ವಿದ್ಯೆ ಯಾವುದು? ಅಪರಾ ವಿದ್ಯೆ ಯಾವುದು?

## (ಮುಂಡಕೋಪನಿಷತ್ತಿನ ಕತೆ)

**ಸ್ವಾಮಿ ವೀರೇಶಾನಂದ**

ಮುಂಡಕೋಪನಿಷತ್ತು ಅಥರ್ವಣವೇದಕ್ಕೆ ಸೇರಿದ್ದು. ಈ ಉಪನಿಷತ್ತು ಆಕಾರದಲ್ಲಿ ಸಣ್ಣದು. ಬ್ರಹ್ಮವಿದ್ಯೆಯೇ ಇದರ ಮುಖ್ಯ ವಿಷಯ. ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳಲು ಬೇಕಾದ ಸಾಧನ ಮತ್ತು ಬ್ರಹ್ಮವಿದ್ಯೆಯ ಫಲಗಳನ್ನು ಈ ಉಪನಿಷತ್ತು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಶಿಷ್ಯ-ಆಚಾರ್ಯರ ಪ್ರಶ್ನೋತ್ತರದ ರೂಪದಲ್ಲಿ ಉಪನಿಷತ್ತು ಈ ಗಹನ ವಿಷಯವನ್ನು ತಿಳಿಸಿಕೊಡುತ್ತದೆ. ಈ ಕಥೆಯ ಹಂದರ ಹೀಗಿದೆ:



ಬ್ರಹ್ಮ ಅಂದರೆ ಚತುರ್ಮುಖ ಬ್ರಹ್ಮನು ದೇವತೆಗಳಿಗೆಲ್ಲ ಹಿರಿಯನಾದವನು. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ — ಇವುಗಳಲ್ಲಿ ಅವನು ಎಲ್ಲರನ್ನೂ ಮೀರಿಸಿದ್ದನು. ದೇವತೆಗಳು ಎಂದರೆ ಪ್ರಕಾಶವುಳ್ಳವರು. ಬ್ರಹ್ಮನು ಅವರಿಗೆಲ್ಲ ಮುಖ್ಯನು; ಮೊದಲನೆಯವನಾಗಿ ಭಗವಂತನಿಂದಲೇ ಹೊರತೋರಿಸಿಕೊಂಡವನು. ಅವನೇ ವಿಶ್ವಕ್ಕೆಲ್ಲ ಕರ್ತಾರನು. ಹಾಗೆಯೇ ಅದನ್ನು ಕಾಪಾಡುವವನು ಕೂಡ. ಈ ಚತುರ್ಮುಖ ಬ್ರಹ್ಮನು ಪರಮಾತ್ಮ ವಿದ್ಯೆಯನ್ನು ಅಥರ್ವ ಎಂಬ ತನ್ನ ಹಿರಿಯ ಮಗನಿಗೆ ಉಪದೇಶ ಮಾಡಿದನು. ಇದೇ ಬ್ರಹ್ಮವಿದ್ಯೆ. ಯಾವ ವಿದ್ಯೆಯ ಮೂಲಕ ಸತ್ಯತತ್ತ್ವವೂ, ಅಕ್ಷರವೂ (ಕ್ಷಯವಾಗದ ತತ್ತ್ವ) ಆದ ಬ್ರಹ್ಮತತ್ತ್ವವನ್ನು ಪಡೆದುಕೊಳ್ಳಬಹುದೋ ಅದೇ ಬ್ರಹ್ಮವಿದ್ಯೆ.

ಈ ಬ್ರಹ್ಮವಿದ್ಯೆಯು ಎಲ್ಲ ಇತರ ವಿದ್ಯೆಗಳಿಗೂ ಮೂಲವಾಗಿರುವ ವಿದ್ಯೆ; ಆಶ್ರಯವಾಗಿರುವ ವಿದ್ಯೆ. ಎಲ್ಲ ವಿದ್ಯೆಗಳ ಮೂಲಕ ಯಾವುದನ್ನು ತಿಳಿದುಕೊಳ್ಳಬಹುದೋ, ಅದರ ಸಾರಸರ್ವಸ್ವವೇ, ಮೂಲವೇ ಈ ವಿದ್ಯೆಯ ಮೂಲಕ ತಿಳಿದುಬರುತ್ತದೆ. ಹೀಗಾಗಿ ಇದು ಸರ್ವವಿದ್ಯೆಗಳಿಗೂ ಆಧಾರಭೂತವಾದ ವಿದ್ಯೆಯಾಗಿದೆ. ಇಂಥ ಬ್ರಹ್ಮವಿದ್ಯೆಯನ್ನು ತನ್ನ ಹಿರಿಯ ಮಗನಾದ ಅಥರ್ವಣನಿಗೆ ಚತುರ್ಮುಖ ಬ್ರಹ್ಮನು ಉಪದೇಶಿಸಿದನು. ಈ ಬ್ರಹ್ಮನು ಇಡೀ ಜಗತ್ತಿಗೇ ಸೃಷ್ಟಿಕರ್ತನಾಗಿದ್ದಾನೆ. ಅವನ ಸೃಷ್ಟಿಯಲ್ಲಿ ಮೊದಲು ಹುಟ್ಟಿದವನು ಈ ಅಥರ್ವಣನು. ಇವನಿಗೆ ಮೊದಲ ಬಾರಿಗೆ ಬ್ರಹ್ಮವಿದ್ಯೆಯ ಉಪದೇಶವಾಯಿತು. ಅಥರ್ವಣನು ಅಂಗಿರನೆಂಬುವನಿಗೆ ಇದನ್ನು ಉಪದೇಶಿಸಿದನು. ಅಂಗಿರನು ಭಾರದ್ವಾಜ ಸತ್ಯವಹನಿಗೆ ಇದನ್ನು ಹೇಳಿಕೊಟ್ಟನು. ಭಾರದ್ವಾಜನು ಅಂಗಿರಸನೆಂಬ ಜಿಜ್ಞಾಸುವಿಗೆ ಈ ವಿದ್ಯೆಯನ್ನು ತಿಳಿಸಿಕೊಟ್ಟನು.

ಅಂಗಿರಸನು ಭಾರದ್ವಾಜನಿಗೆ ಕೇವಲ ಶಿಷ್ಯನಲ್ಲ. ಅವನ ಮಗನೇ ಆಗಿದ್ದನು. ಹೀಗಾಗಿ ಇದು ಹಿರಿಯರು ಕಿರಿಯವರಿಗೆ ಹೇಳಿ ಕೊಟ್ಟ ವಿದ್ಯೆ ಎಂದೂ ಆಗುತ್ತದೆ. ಆದ್ದರಿಂದ ಈ ವಿದ್ಯೆಗೆ ಪರಾವರ ವಿದ್ಯೆ ಎಂದು ಹೆಸರು. ಈ ವಿದ್ಯೆಯ ಮಹತ್ವ ಏನು ಗೊತ್ತೆ? ಇದಕ್ಕೆ ಪರಾಪರ ವಿದ್ಯೆ ಎಂದೂ ಹೆಸರು. ಪರವಿದ್ಯೆ ಎಂದರೆ ಪರಬ್ರಹ್ಮ ವಿದ್ಯೆಯಾದ ಜ್ಞಾನ. ಅಪರಾವಿದ್ಯೆ ಎಂದರೆ ಸಗುಣ ಬ್ರಹ್ಮ ಅಥವಾ ಈಶ್ವರನ ಧ್ಯಾನ ಅಥವಾ ಉಪಾಸನೆ. ಪರಂಪರೆಯಲ್ಲಿ ಬಂದ ಈ ಮಹಾವಿದ್ಯೆಯು ಈ ಎರಡು ರೀತಿಯ ವಿದ್ಯೆಗಳನ್ನೂ ಒಳಗೊಂಡಿದೆ.

ಇರಲಿ. ಸಿಂಧೂ ದೇಶವು ವೈದಿಕ ಸಂಸ್ಕೃತಿಯ ಆಗರ. ಇದರಲ್ಲಿ ಶೌನಕನೆಂಬ ಪ್ರಸಿದ್ಧನಾದ ಗೃಹಸ್ಥನೊಬ್ಬನಿದ್ದನು. ಅವನು ಯಜ್ಞಯಾಗಾದಿಗಳನ್ನು ಬಹಳ ನಿಷ್ಠೆಯಿಂದ ಆಚರಿಸುತ್ತಿದ್ದನು. ಗೃಹಸ್ಥರಿಗೆ ವೇದವು ಗೊತ್ತು ಮಾಡಿದ ರೀತಿಯಲ್ಲಿ ಆದರ್ಶ ಜೀವನವನ್ನು ನಡೆಸುತ್ತಿದ್ದನು. ಅವನು ಶಾಸ್ತ್ರಗಳಲ್ಲಿ ಹೇಳಿದ ರೀತಿಯಲ್ಲಿ, ಸಮಿತ್ತಿನ ಕಟ್ಟಿಗೆಯ ತುಂಡುಗಳನ್ನು ಹಿಡಿದುಕೊಂಡು, ವಿನಯದಿಂದ ಅಂಗಿರಸನನ್ನು ಸಮೀಪಿಸಿದನು. ಅವರಿಗೆ ದೀರ್ಘದಂಡ ನಮಸ್ಕಾರ ಮಾಡಿ, ಒಂದು ಮಹತ್ವದ ಪ್ರಶ್ನೆಯನ್ನು ಕೇಳಿದನು. ಭಾರತೀಯ ತತ್ತ್ವಜಿಜ್ಞಾಸೆಯಲ್ಲಿಯೇ ಅತ್ಯಂತ ಗಹನವಾದ ಪ್ರಶ್ನೆಗಳಲ್ಲಿ ಇದೂ ಒಂದು. ಅವನು ಕೇಳಿದ ಪ್ರಶ್ನೆ ಹೀಗಿತ್ತು: ''ಭಗವನ್, ಯಾವುದನ್ನು ಅರಿತುಕೊಂಡರೆ, ಎಲ್ಲವನ್ನೂ ತಿಳಿದುಕೊಂಡಂತೆ ಆಗುತ್ತದೆ?''

ಜಗತ್ತು ನಾಮರೂಪಗಳಿಂದ ಬೇರೆಬೇರೆಯಾಗಿ ತೋರುತ್ತದೆ. ಉದಾಹರಣೆಗೆ ಒಂದೇ ಮಣ್ಣಿನ ಮುದ್ದೆ ಹಲವು ಮಡಕೆಗಳಾಗಿ ತೋರುತ್ತದೆ. ಮಡಕೆಗಳ ಜ್ಞಾನವನ್ನು ವಿಶೇಷ ಜ್ಞಾನ ಎಂದು ಕರೆಯಬಹುದು. ಅಂದರೆ, ಒಂದೊಂದು ವಿಶೇಷ ಪದಾರ್ಥಗಳ

ಜ್ಞಾನ. ಆ ಮಡಕೆಗಳೆಲ್ಲವೂ ಯಾವುದರಿಂದ ಆಗಿದೆಯೋ, ಅದು ಯಾವುದು? ಮಣ್ಣು ತಾನೇ. ಮಣ್ಣಿನ ಜ್ಞಾನವನ್ನು ಪಡೆದುಕೊಂಡರೆ, ಎಲ್ಲ ಮಡಕೆಗಳ ಜ್ಞಾನವನ್ನೂ ಪಡೆದುಕೊಂಡಂತೆ ಆಗುತ್ತದೆ, ಅಲ್ಲವೆ? ಇಂಥ ಜ್ಞಾನವನ್ನು ಸಾಮಾನ್ಯ ಜ್ಞಾನ ಎನ್ನುತ್ತಾರೆ. ನಮಗೆ ಜಗತ್ತಿನ ಬಗ್ಗೆ ಇರುವ ವಿಶೇಷ ಜ್ಞಾನ ಭೌತಿಕ ವಿಜ್ಞಾನದಿಂದ ಅಥವಾ ನಮ್ಮ ಇಂದ್ರಿಯಗಳ ಮೂಲಕವೇ ಧಾರಾಳವಾಗಿ ದೊರಕುತ್ತದೆ. ಆದರೆ ಈ ಜಗತ್ತಿನ ವಿವಿಧತೆಯ ಆಧಾರಭೂತವಾಗಿ ಯಾವುದು ಇರುವುದೋ ಅದರ ಜ್ಞಾನವನ್ನು ಶಿಷ್ಯನು ಇಲ್ಲಿ ಅಪೇಕ್ಷಿಸುತ್ತಿದ್ದಾನೆ. ಜಗತ್ತಿನ ಭೇದಕ್ಕೆಲ್ಲ ಕಾರಣನಾಗಿರುವವನು ಯಾರಿದ್ದಾನೆಯೋ, ಅವನನ್ನು ತಿಳಿದುಕೊಂಡರೆ ಎಲ್ಲವನ್ನು ತಿಳಿದುಕೊಂಡಂತೆ ಆಗುತ್ತದೆ ಅಲ್ಲವೆ? ಅಂಥ ತತ್ತ್ವ ಅದಾವುದು ಎನ್ನುವುದೇ ಈ ಪ್ರಶ್ನೆಯ ಅರ್ಥ. ಈ ಪ್ರಶ್ನೆಯಲ್ಲಿ ಎರಡು ವಿಭಾಗಗಳಿವೆ. ಅಂಥ ಏಕತ್ವರೂಪದ ವಸ್ತು ಇದೆಯೋ ಇಲ್ಲವೋ ಎಂಬುದು ಒಂದು. ಇದೆ ಎಂದಾದರೆ, ಅದು ಏನು, ಅದನ್ನು ತಿಳಿದುಕೊಳ್ಳುವುದು ಹೇಗೆ ಎನ್ನುವುದು ಇನ್ನೊಂದು.

ಅತ್ಯಂತ ಯಶಸ್ವೀ ಗೃಹಸ್ಥನಾದ ಶೌನಕನು ಕೇಳಿದ ಈ ಪ್ರಶ್ನೆಯನ್ನು ಕೇಳಿ ಗುರುವಾದ ಅಂಗಿರಸನು ಬೆರಗಾಗಿ ಹೋದನು; ಶೌನಕನ ಪ್ರಶ್ನೆಯ ಗಹನತೆಯನ್ನು ಕಂಡು ಹಾಗೂ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಅವನ ಆಸಕ್ತಿಯನ್ನು ಕಂಡು ತಲೆದೂಗಿದನು. ಇಷ್ಟಾದರೂ ನೇರವಾಗಿ ಅವನಿಗೆ ಉತ್ತರವನ್ನು ನೀಡಲು ಹೋಗಲಿಲ್ಲ. ಅದಕ್ಕೆ ಬದಲಾಗಿ ಗೃಹಸ್ಥನಾದ ಶೌನಕನು ಈಗಾಗಲೇ ಅನುಸರಿಸುತ್ತಿರುವ ಯಜ್ಞಯಾಗ, ಧ್ಯಾನ — ಇವುಗಳಿಂದ ಕೂಡಿದ ಜೀವನವಿಧಾನದ ಸೀಮಿತತೆಯನ್ನು ಅವನಿಗೆ ಅರಿವು ಮಾಡಿಕೊಡಲು ಪ್ರಯತ್ನಿಸಿದನು. ಇಂಥ ಅಪರಾವಿದ್ಯೆಗಿಂತ ಅಥವಾ ಕೆಳಮಟ್ಟದ ವಿದ್ಯೆಗಿಂತ ಮಿಗಿಲಾದ ಪರಾವಿದ್ಯೆಯಲ್ಲಿಯೇ ಶೌನಕನು ತನ್ನ ಪ್ರಶ್ನೆಯ ಉತ್ತರವನ್ನು ಕಂಡುಕೊಳ್ಳಬೇಕು ಎಂದು ಮನಗಾಣಿಸಿದನು. ಅದಕ್ಕಾಗಿಯೇ, ಅವನು ಹೀಗೆ ಹೇಳುತ್ತಾನೆ: ''ಶೌನಕ. ಎರಡು ವಿದ್ಯೆಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇದನ್ನು ನಾನು ಹೇಳುತ್ತಿಲ್ಲ, ವೇದಗಳ ಅರ್ಥವನ್ನು ಚೆನ್ನಾಗಿ ಅರಿತವರೇ ಹಾಗೆ ಹೇಳುತ್ತಾರೆ. ಅಂಥವರು ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಅವರು ಹೇಳುವ ಪ್ರಕಾರ ಅಂಥ ಎರಡು ರೀತಿಯ ವಿದ್ಯೆಗಳಿವೆ: ಒಂದು ಪರಾವಿದ್ಯೆ; ಇನ್ನೊಂದು ಅಪರಾ ವಿದ್ಯೆ.''

## ಎರಡು ವಿದ್ಯೆಗಳ ಸ್ವರೂಪ

ಅಂಗಿರಸನು ಅಪರಾವಿದ್ಯೆಯ ಸ್ವರೂಪವನ್ನು ಹೇಳಲು ಆರಂಭಿಸುತ್ತಾನೆ. ''ಮಗೂ, ಶೌನಕ, ಅಪರಾವಿದ್ಯೆಯೆಂದರೆ ಯಾವುದು ಗೊತ್ತೆ? ನಮ್ಮ ವೈದಿಕ ಸಮಾಜದಲ್ಲಿ ಯಾವುದಕ್ಕೆ ಬಹಳ ಪ್ರಮುಖವಾದ ಸ್ಥಾನವನ್ನು ನೀಡಿದ್ದೇವೆಯೋ, ಅವುಗಳ ಅಧ್ಯಯನವೆಲ್ಲವೂ ಅಪರಾವಿದ್ಯೆಯೇ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ — ಈ ನಾಲ್ಕು ವೇದಗಳ ಜ್ಞಾನ ಕೂಡ ಅಪರಾವಿದ್ಯೆಯೇ ಆಗಿದೆ. ಇದಲ್ಲದೆ, ಆ ವೇದಗಳ ಅಧ್ಯಯನಕ್ಕೆ ನಮಗೆ ಸಹಾಯ ಮಾಡುವ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಮುಂತಾದ ವೇದಾಂಗಗಳು ಕೂಡ ಅಪರಾವಿದ್ಯೆಯೇ ಎಂದು ಹೇಳಬಹುದು. ಇನ್ನು ಪರಾವಿದ್ಯೆ ಎಂದರೆ ಯಾವುದು ಎಂದು ಕೇಳುವೆಯೇನು? **ಅಥ ಪರಾ ಯಯಾ ತದಕ್ಷರಮ್ ಅಧಿಗಮ್ಯತೇ** — ಯಾವುದರ ಮೂಲಕ ಕ್ಷಯವಿಲ್ಲದ ತತ್ತ್ವವಾದ ಬ್ರಹ್ಮಪ್ರಾಪ್ತಿಯು ಸಾಧ್ಯವಾಗುವುದೋ, ಅದೇ ಪರಾವಿದ್ಯೆ.

''ಇನ್ನು 'ಅಕ್ಷರ' ಎಂದರೆ ಯಾವುದು ಎಂದು ತಿಳಿದುಕೋ. ಬ್ರಹ್ಮವಸ್ತುವನ್ನೇ ಅಕ್ಷರ ಎಂದು ಕರೆಯುವುದು. ಅದು ನೋಡುವುದಕ್ಕೆ, ಚಿಂತಿಸುವುದಕ್ಕೆ ಸಿಲುಕದ ಅತೀಂದ್ರಿಯ ವಸ್ತು. ಇದಕ್ಕೆ ಜಾತಿಗೋತ್ರಗಳು ಇಲ್ಲ. ಏಕೆಂದರೆ ಇದು ಹುಟ್ಟಿರುವಂಥದ್ದೇ ಅಲ್ಲ. ಅಲ್ಲದೆ, ಅದು ಕಣ್ಣುಕಿವಿಗಳಂತೆ ಇಂದ್ರಿಯವೂ ಅಲ್ಲ ; ಕೈಕಾಲುಗಳಂತೆ ದೇಹಾಂಗವೂ ಅಲ್ಲ. ಇದು ನಿತ್ಯವಾದ ವಸ್ತು, ಎಲ್ಲ ಕಡೆ ಇರುವ ಸರ್ವವ್ಯಾಪಿ; ಎಲ್ಲದರ ಅರಿವೂ ಇದೇ ಆಗಿದೆ. ಇದು ಎಲ್ಲದಕ್ಕಿಂತ ಸೂಕ್ಷ್ಮವಾದುದು; ಇದು ಕಳೆಗುಂದದ ಅವ್ಯಯ ವಸ್ತು. ಎಲ್ಲ ಜೀವರಾಶಿಗಳ ಮೂಲಕಾರಣವೇ ಇದು. ತಿಳಿದವರು ಇದರ ಬಗ್ಗೆ ಹೀಗೆ ಹೇಳುತ್ತಾರೆ. ಇಂಥ 'ಅಕ್ಷರ'ವನ್ನು ತಿಳಿದುಕೊಳ್ಳುವುದೇ ಪರಾವಿದ್ಯೆ. ಶೌನಕ, ತಿಳಿಯಿತೆ?''

## ಅಕ್ಷರದಿಂದ ಕ್ಷರ

''ಶೌನಕ, ಈ ಅಕ್ಷರ ತತ್ತ್ವವು ಭೂತಯೋನಿಯಾಗಿದೆ. ಅಂದರೆ ಎಲ್ಲ ಜೀವರಾಶಿಗಳಿಗೂ ಕಾರಣವಾಗಿದೆ ಎಂದು ಈಗಾಗಲೇ ನಾನು ಹೇಳಿದೆನಲ್ಲವೆ? ಅದರಿಂದ ಏನೆಲ್ಲವೂ ಹುಟ್ಟುತ್ತವೆ, ಹೇಗೆ ಹುಟ್ಟುತ್ತವೆ ಎಂದು ಸಂಕ್ಷಿಪ್ತವಾಗಿ ಹೇಳುತ್ತೇನೆ, ಕೇಳು. ಜೇಡರ ಹುಳು ತನ್ನ ಬಲೆಯನ್ನು ಕಟ್ಟುತ್ತದೆ. ಹೇಗೆ ಕಟ್ಟುತ್ತದೆ, ಹೇಳು? ಅದು ಬೇರಾವುದೇ ವಸ್ತುವನ್ನು ಬಯಸುವುದಿಲ್ಲ. ಅದೇ ತನ್ನನ್ನು ವಿಸ್ತರಿಸಿಕೊಂಡು, ಜೇಡರ ಬಲೆಯೂ ಆಗಿಬಿಡುತ್ತದೆ. ಹಾಗೆಯೇ ಅದು ತನ್ನ ಬಲೆಯನ್ನು ಹಿಂತೆಗೆದುಕೊಳ್ಳುತ್ತದೆ, ಕೂಡ. ಇನ್ನೊಂದು ದೃಷ್ಟಾಂತವನ್ನೂ ನೀಡಬಹುದು. ಮನುಷ್ಯನ ದೇಹದಿಂದ ದೊಡ್ಡ ಕೂದಲುಗಳು, ಸಣ್ಣ ಕೂದಲುಗಳು ತಾವಾಗಿಯೇ ಹುಟ್ಟುತ್ತವೆ. ಇದೇ ರೀತಿ ಅಕ್ಷರವೆಂಬ ಪರಮಾತ್ಮ ತತ್ತ್ವವು, ಬೇರೆ ಯಾವುದರ ಸಹಾಯವನ್ನೂ ಬಯಸದೆ, ತಾನೇತಾನಾಗಿ ತನ್ನಿಂದಲೇ ಜಗತ್ತೆಲ್ಲವನ್ನೂ ಸೃಷ್ಟಿಸುತ್ತದೆ. ಕಡೆಗೆ ಸೃಷ್ಟಿಸಿದ ಎಲ್ಲವನ್ನೂ ತನ್ನಲ್ಲಿಯೇ ವಿಲೀನ ಮಾಡಿಕೊಳ್ಳುತ್ತದೆ. ಈ ಸೃಷ್ಟಿಕ್ರಮದಲ್ಲಿ ಒಂದು ಗೊತ್ತುಪಡಿಸಿದ ಕ್ರಮವಿದೆ. ಅದನ್ನು ಹೇಳುತ್ತೇನೆ, ಕೇಳು.

''ಅಕ್ಷರವಾದ ಬ್ರಹ್ಮವು ತಾನು ಸೃಷ್ಟಿಯನ್ನು ಮಾಡಬೇಕು ಎಂಬ ಇಚ್ಛೆಯನ್ನು ತಾಳುತ್ತದೆ. ಅದೇ ಸೃಷ್ಟಿಜ್ಞಾನ. ಬೀಜವು ಅಂಕುರವನ್ನು ಉಂಟುಮಾಡುವಾಗ ಉಬ್ಬುತ್ತದೆ ತಾನೆ? ಅದೇ ರೀತಿ, ಸೃಷ್ಟಿಮಾಡುವ ಅರಿವಿನಿಂದ ಅಥವಾ ಸಂಕಲ್ಪದಿಂದ ಕೂಡಿದ ಬ್ರಹ್ಮವು ದೊಡ್ಡದಾಗುತ್ತದೆ, ದಪ್ಪವಾಗುತ್ತದೆ. ಇಲ್ಲಿ ಜ್ಞಾನ

ಎಂದರೆ ಏನು ಗೊತ್ತೆ? ಬ್ರಹ್ಮವು ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ — ಇವುಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದೆ; ಅದೇ ರೀತಿ ಅದನ್ನು ಮಾಡುವ ಜ್ಞಾನವನ್ನೂ ಪಡೆದುಕೊಂಡಿದೆ. ಇದನ್ನೇ ಜ್ಞಾನ ಎಂದು ಕರೆಯುವುದು. ಇಂಥ ಬ್ರಹ್ಮವು ಅವ್ಯಾಕೃತವನ್ನು ಉಂಟುಮಾಡುತ್ತದೆ. ಅವ್ಯಾಕೃತ ಎಂದರೆ ಜಗತ್ತು ನಾಮರೂಪಗಳಾಗಿ ಹೊರತೋರುವುದಕ್ಕೆ ಮುಂಚಿನ ಅವುಗಳ ಸೂಕ್ಷ್ಮಸ್ಥಿತಿ. ಬೀಜದಲ್ಲಿ ಮುಂದೆ ಬೆಳೆಯುವ ಹೆಮ್ಮರವು ಸೂಕ್ಷ್ಮರೂಪದಲ್ಲಿ ಇರುತ್ತದೆ, ಅಲ್ಲವೆ? ಹಾಗೆಯೇ ಇದು ಕೂಡ.

''ಇಂಥ ಅವ್ಯಾಕೃತದಿಂದ ಹಿರಣ್ಯಗರ್ಭವು ಹುಟ್ಟುತ್ತದೆ. ಹಿರಣ್ಯಗರ್ಭವೆಂದರೆ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳಿಂದ ಕೂಡಿಕೊಂಡು, ಅಖಂಡ ಜಗತ್ತಿನ ವೈವಿಧ್ಯಗಳನ್ನು ಒಳಗೊಂಡ, ಇಡೀ ಸೃಷ್ಟಿಯ ಸಾಮಾನ್ಯರೂಪ. ಜಗತ್ತಿನ ಸೃಷ್ಟಿಗೆ ಕಾರಣೀಭೂತವಾದ ಅವಿದ್ಯೆಯಿಂದ ಕಾಮವು ಹುಟ್ಟುತ್ತದೆ. ಕಾಮದಿಂದ ಕರ್ಮವು ಜನಿಸುತ್ತದೆ. ಕರ್ಮದಿಂದ ಎಲ್ಲ ಬಗೆಯ ಜೀವಿಗಳು ಹುಟ್ಟುತ್ತವೆ. ಹಿರಣ್ಯಗರ್ಭನು ಈ ಅವಿದ್ಯೆ-ಕಾಮ-ಕರ್ಮದ ಬೀಜರೂಪನಾಗಿ ಇರುವವನು. ಅವನಿಂದಲೇ ಅವೆಲ್ಲವೂ ಮೂಡುತ್ತವೆ. ಹಿರಣ್ಯಗರ್ಭನಿಂದ ಅತ್ಯಂತ ಸೂಕ್ಷ್ಮವಾದ ಸೃಷ್ಟಿಯಾದ ಮನಸ್ಸು ತಲೆದೋರುತ್ತದೆ. ಮನಸ್ಸು ಎಂದರೆ ಸಂಕಲ್ಪ, ವಿಕಲ್ಪ, ಸಂಶಯ, ನಿರ್ಣಯ ಮುಂತಾದ ರೂಪಗಳನ್ನು ತಾಳುವ ತತ್ತ್ವ. ಇದರಿಂದ ಪಂಚಭೂತಗಳು ಹುಟ್ಟುತ್ತವೆ. ಪಂಚಭೂತಗಳನ್ನು ಋಷಿಗಳು ಸತ್ಯ ಎಂದು ಕರೆಯುತ್ತಾರೆ. ಈ ಜಗತ್ತು ಸತ್ಯವಾದರೆ, ಪರಮಾತ್ಮನು ಸತ್ಯದ ಸತ್ಯ (ಸತ್ಯಸ್ಯ ಸತ್ಯ). ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ — ಈ ಪಂಚಭೂತಗಳಿಂದ ಭೂಃ ಎಂದು ಮೊದಲಾಗುವ ಏಳು ಲೋಕಗಳು ಹುಟ್ಟುತ್ತವೆ. ಈ ಲೋಕಗಳಲ್ಲಿ ಮನುಷ್ಯ ಮುಂತಾದ ಪ್ರಾಣಿಗಳು ಹುಟ್ಟುತ್ತಾರೆ. ಮನುಷ್ಯರಲ್ಲಿ ವರ್ಣಾಶ್ರಮ ಮೊದಲಾದ ಸಾಮಾಜಿಕ ವ್ಯವಸ್ಥೆಗಳು ಉಗಮವಾಗುತ್ತವೆ. ಇಂಥ ಸಾಮಾಜಿಕ ವ್ಯವಸ್ಥೆಯು ಒಬ್ಬೊಬ್ಬ ಜೀವಿಯೂ ಮಾಡುವ ಕರ್ಮವನ್ನು ಪ್ರೇರೇಪಿಸುತ್ತದೆ. ಕರ್ಮಗಳು ಫಲವನ್ನು ನೀಡುತ್ತವೆ. ಕರ್ಮಗಳು ಇರುವ ತನಕ ಫಲಗಳು ಇದ್ದೇ ಇರುತ್ತವೆ. ಹೀಗೆ ಇಡೀ ವಿಶ್ವವ್ಯವಸ್ಥೆಯು ಅಕ್ಷರವೆಂಬ ಹೆಸರಿನ ಬ್ರಹ್ಮತತ್ತ್ವದಿಂದ ಒಡಮೂಡುತ್ತದೆ.''

ಅಂಗಿರಸರು ಶೌನಕನಿಗೆ ತಾವು ಹೇಳಿದುದರ ಸಾರಾಂಶವನ್ನು ತಿಳಿಹೇಳುತ್ತಾರೆ: ''ಮಗು, ಅಕ್ಷರವೆಂಬ ಬ್ರಹ್ಮವು ಈ ಜಗತ್ತೆಲ್ಲವೂ ಆಗಿ ಪರಿಣಮಿಸಿರುವುದರಿಂದ ಸರ್ವಜ್ಞನು. ಅವನು ಎಲ್ಲವನ್ನೂ ತಿಳಿದವನು. ಹಾಗೆಯೇ ಪ್ರತಿಯೊಂದನ್ನೂ ಅರಿತವನು. ಅವನು ಮಾಡುವ ಸೃಷ್ಟಿಕ್ರಿಯೆಗೆ ಜ್ಞಾನರೂಪವಾಗಿರುವ ತಪಸ್ಸೇ ಮೂಲವಾಗಿರುತ್ತದೆ. ಅಂದರೆ ಮನುಷ್ಯರಂತೆ ಪ್ರಯತ್ನಪೂರ್ವಕವಾಗಿ ಅವನು ತಪಸ್ಸನ್ನು ಮಾಡುವುದಿಲ್ಲ. ಸೃಷ್ಟಿಯ ಬಗೆಗಿನ ಜ್ಞಾನವು ಅವನಲ್ಲಿ ಈಗಾಗಲೇ ಸುಪ್ತವಾಗಿರುತ್ತದೆ. ಅದರಿಂದಲೇ ಸೃಷ್ಟಿಯ ಸಂಕಲ್ಪವನ್ನು ಅವನು ಮಾಡಿದಾಗ, ತಾನೇತಾನಾಗಿ ಸೃಷ್ಟಿಕಾರ್ಯವು ಆರಂಭವಾಗುತ್ತದೆ. ಇದಕ್ಕಾಗಿ ಅವನು ಯಾವುದೇ ಪ್ರಯತ್ನವನ್ನೂ ಮಾಡುವ ಆವಶ್ಯಕತೆ ಇರುವುದಿಲ್ಲ. ಇಂಥ ಸರ್ವಜ್ಞನಿಂದ ಕಾರ್ಯಬ್ರಹ್ಮ ಎನ್ನಿಸಿದ ಹಿರಣ್ಯಗರ್ಭ ತತ್ತ್ವವು ಹುಟ್ಟುತ್ತದೆ. ಅವನಿಂದ ವಿವಿಧ ವಸ್ತುಗಳ ಮೂಲವಾದ ಹೆಸರು ಮತ್ತು ರೂಪಗಳು ಹುಟ್ಟುತ್ತವೆ. ತದನಂತರ, ಆಹಾರವಿಧಾನಗಳಾದ ಭತ್ತ, ಜವೆ ಮುಂತಾದ ಧಾನ್ಯಗಳ ಉತ್ಪತ್ತಿಯಾಗುತ್ತದೆ. ಈ ಅನ್ನದ ಸಹಾಯದಿಂದಲೇ ಜೀವಿಗಳು ಜನಿಸುವುದು.''

## ಅಪರಾವಿದ್ಯೆಯ ಗತಿ ಯಾವುದು?

ಇಷ್ಟು ಪರಾವಿದ್ಯೆಯ ವಿಷಯ. ಇನ್ನುಮುಂದೆ ಯಜ್ಞಯಾಗಾದಿಗಳ ವಿವರಗಳನ್ನು ಒಳಗೊಂಡ ಅಪರಾ ವಿದ್ಯೆಯನ್ನು ಗುರುವು ವಿವರಿಸಲು ಆರಂಭಿಸುತ್ತಾನೆ. ಉಪನಿಷತ್ತಿನ ಮುಖ್ಯ ವಿಷಯವು ಪರಾವಿದ್ಯೆಯೇ. ಆದರೆ ಅಪರಾವಿದ್ಯೆಯನ್ನು ಕೂಡ ವಿವರಿಸಿರುವುದರಲ್ಲಿ ಒಂದು ಉದ್ದೇಶವಿದೆ. ಅಪರಾವಿದ್ಯೆಯು ಯಾವುದನ್ನು ಕಲಿಸುತ್ತದೆ? ಕರ್ತೃ, ಕ್ರಿಯೆ, ಕ್ರಿಯೆಗಳ ಸಾಧನ, ಕ್ರಿಯೆಯಿಂದ ಉಂಟಾಗುವ ಫಲ — ಇವುಗಳಿಗಷ್ಟೇ ಅದು ಸೀಮಿತವಾಗಿದೆ. ಅದು ಮುಕ್ತಿಪ್ರಾಪ್ತಿಗೆ ಅವಶ್ಯವಾದ ಆತ್ಮಜ್ಞಾನವನ್ನು ಉಪದೇಶಿಸುವುದಿಲ್ಲ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಹುಟ್ಟುಸಾವುಗಳ ಚಕ್ರಕ್ಕೆ ಕಾರಣವಾದ (ಸಂಸಾರಚಕ್ರ) ಕರ್ಮಗಳ ವಿಧಾನವನ್ನು ಬೋಧಿಸುವುದಕ್ಕಷ್ಟೇ ಅಪರಾವಿದ್ಯೆಯು ಸೀಮಿತವಾಗಿದೆ. ಈ ವಿದ್ಯೆಯ ವಿಷಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ದುಃಖವನ್ನು ಮಾತ್ರವೇ ಅನುಭವಿಸಬೇಕಾಗುತ್ತದೆ. ಈ ಸಂಸಾರದಲ್ಲಿ ಸುಖದ ಲೇಶಮಾತ್ರವೂ ಇಲ್ಲ. ಇದನ್ನು ಸಾಧಕನಿಗೆ ಮನದಟ್ಟು ಮಾಡಿಕೊಡಲು, ಗುರುವಾದ ಅಂಗಿರಸನು ಶಿಷ್ಯನಾದ ಶೌನಕನಿಗೆ ಸಂಸಾರ ಗತಿಯೇ ಲಕ್ಷ್ಯವಾಗುಳ್ಳ ಅಪರಾ ವಿದ್ಯೆಯನ್ನು ಕೂಡ ಸಂಕ್ಷಿಪ್ತವಾಗಿ ಬೋಧಿಸುತ್ತಾನೆ. ಅವುಗಳ ಕ್ಷಣಿಕತೆಯನ್ನೂ, ಅರ್ಥಹೀನತೆಯನ್ನೂ ಆ ಮೂಲಕ ಶಿಷ್ಯನಿಗೆ ಮನಗಾಣಿಸುತ್ತಾನೆ.

ಲೋಕಗಳಲ್ಲಿ ಹಲವು ಹಂತಗಳು ಇರುತ್ತವೆ. ಅವುಗಳನ್ನು ಪುಣ್ಯಕರ್ಮಗಳನ್ನು ಮಾಡಿ ಸಂಪಾದಿಸಿಕೊಳ್ಳಬಹುದು. ಅಂಥ ಕರ್ಮಗಳು ಹಲವು ವಿಧವಾಗಿವೆ. ವೇದಗಳಲ್ಲಿ ಅವುಗಳನ್ನು ಉಪದೇಶಿಸಲಾಗಿದೆ. ಅವುಗಳನ್ನು ಸತ್ಯಕಾಮರಾಗಿ ನಾವು ಆಚರಿಸಬೇಕು. ಸತ್ಯಕಾಮನೆಂದರೆ, ಕರ್ಮಫಲದಲ್ಲಿ ಆಸಕ್ತಿಯನ್ನು ಹೊಂದಿರುವವನು ಎಂದರ್ಥ. ನಾವು ಸ್ವರ್ಗ ಮುಂತಾದ ಫಲಗಳನ್ನು ಪಡೆಯಲು ಬಯಸುವುದಾದರೆ ಕರ್ಮಗಳನ್ನು ಶ್ರದ್ಧೆಯಿಂದ ಮಾಡಬೇಕು. ಈ ಕರ್ಮಗಳಲ್ಲೆಲ್ಲ ಮೊದಲನೆಯದು ಅಗ್ನಿಹೋತ್ರ. ಅದನ್ನು ಗುರುವು ಶಿಷ್ಯನಿಗೆ ವಿವರಿಸಿ ಹೇಳುತ್ತಾರೆ. ಈ ಕರ್ಮಗಳನ್ನು ಮಾಡುವಾಗ ಹಲವಾರು ಅಡಚಣೆಗಳು ಉಂಟಾಗಲು ಸಾಧ್ಯ. ವಿಸ್ತಾರವಾಗಿರುವ ಅವುಗಳನ್ನು ಚಾಚೂ ತಪ್ಪದೆ ಮಾಡುವುದು ಬಹಳ ಕಷ್ಟ. ಅಲ್ಲದೆ ಈ ಕರ್ಮಗಳನ್ನು ಹೀಗೆಯೇ ಮಾಡಬೇಕು, ಈ ಸಮಯದಲ್ಲಿಯೇ ಮಾಡಬೇಕು, ಈ ಬಗೆಯ ಪರಿಕರಗಳಿಂದಲೇ ಮಾಡಬೇಕು ಎಂಬ ನಿಬಂಧನೆ

ಗಳು ಹಲವಾರು ಇವೆ. ಹೀಗಾಗಿ ಕರ್ಮಗಳನ್ನು ಮಾಡುವುದು ಅತಿಕಷ್ಟ. ಅವುಗಳನ್ನು ಯಶಸ್ವಿಯಾಗಿ ಮಾಡಿದರೆ, ಹೆಚ್ಚು ಹೆಚ್ಚು ಉನ್ನತ ಲೋಕಗಳನ್ನು ಪಡೆಯಬಹುದು. ಆದರೆ ಆ ಲೋಕಗಳಲ್ಲಿ ಶಾಶ್ವತವಾಗಿ ಇರಲು ಸಾಧ್ಯವೇ ಇಲ್ಲ. ಕರ್ಮದ ಪುಣ್ಯಫಲ ತೀರಿದೊಡನೆ, ಮತ್ತೆ ಭೂಲೋಕಕ್ಕೆ ಮರಳಿ ಬರಲೇಬೇಕಾಗುತ್ತದೆ.

ಅನಂತರ, ಕರ್ಮಗಳನ್ನು ಮಾಡಲು ಸಾಧನವಾದ ಅಗ್ನಿಯ ಬಗ್ಗೆ ಅಂಗಿರಸನು ಹೇಳಿಕೊಡುತ್ತಾನೆ. ಈ ಅಗ್ನಿಗೆ ಕಾಲೀ, ಕರಾಲೀ, ಮನೋಜವೆ, ಸುಲೋಹಿತೆ ಸುಧೂಮ್ರವರ್ಣೆ, ಸ್ಫುಲಿಂಗಿನೀ, ವಿಶ್ವರುಚಿ ಎಂಬ ಏಳು ನಾಲಗೆಗಳು. ಈ ಏಳು ನಾಲಗೆಗಳಿಂದ ಕೂಡಿ ಹೊಳೆಯುತ್ತಿರುವ ಅಗ್ನಿಯನ್ನು ಮುಂದಿಟ್ಟುಕೊಂಡು, ಕಾಲಕ್ಕೆ ಸರಿಯಾಗಿ ಕರ್ಮವನ್ನು ಮಾಡಬೇಕು; ಆಹುತಿಗಳನ್ನು ಅಗ್ನಿಗೆ ನೀಡಬೇಕು. ಅವನು ಮರಣ ಹೊಂದಿದ ಮೇಲೆ ಆ ಆಹುತಿಗಳೇ ಸೂರ್ಯರಶ್ಮಿಗಳಾಗಿ ಅಂಥ ಸಾಧಕನನ್ನು, ದೇವತಾಧಿಪತಿಯಾದ ಇಂದ್ರನ ಬಳಿಗೆ ಕರೆದುಕೊಂಡು ಹೋಗುತ್ತವೆ. ಇದನ್ನು ಕಾವ್ಯಮಯವಾಗಿ ಗುರುವು ಹೀಗೆ ವಿವರಿಸುತ್ತಾನೆ: ಯಜಮಾನನು ಯಜ್ಞದಲ್ಲಿ ನೀಡಿದ ಆಹುತಿಗಳೇ ಸೂರ್ಯರಶ್ಮಿಗಳಾಗಿ ಪರಿಣಮಿಸುತ್ತವೆ. ಹೊಳೆಯುತ್ತಿರುವ ಅವುಗಳು ಒಳ್ಳೆಯ ಹೊಗಳಿಕೆಯ ಮಾತುಗಳನ್ನು ಆಡುತ್ತ, ಯಜಮಾನನನ್ನು ಚೆನ್ನಾಗಿ ಮರ್ಯಾದೆ ಮಾಡುತ್ತ, ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತವೆ.

ಗುರುಗಳು ಮುಂದುವರಿದು ಹೇಳುತ್ತಾರೆ: ''ಆದರೆ, ಶೌನಕನೇ, ನೆನಪಿಡು. ಜ್ಞಾನರಹಿತವಾದ ಈ ಕರ್ಮಕ್ಕೆ ಅನಿತ್ಯವಾದ ಲೋಕಗಳನ್ನು ಹೋಗಿ ಸೇರುವುದಷ್ಟೇ ಫಲ. ಅದಕ್ಕಿಂತ ಹೆಚ್ಚು ಯಾವ ಫಲವೂ ಅದಕ್ಕೆ ದೊರಕುವುದಿಲ್ಲ. ಇದನ್ನೇ ಸಂಸಾರ ಅಂದರೆ, ಅವಿದ್ಯೆ-ಕಾಮ-ಕರ್ಮಗಳಿಂದ ಹುಟ್ಟಿದ ಲೋಕಗಳು ಎನ್ನುವುದು. ಅವುಗಳಲ್ಲಿ ಯಾವುದೇ ತಿರುಳು ಇಲ್ಲ. ಇವು ಹಗುರವಾದಂಥವು. ಇವುಗಳಲ್ಲಿ ಯಾವ ದೃಢತೆಯೂ ಇಲ್ಲ. ಕರ್ಮ, ಕರ್ಮಫಲ — ಈ ಎರಡೂ ನಾಶವಾಗುವ ಸ್ವಭಾವ ಉಳ್ಳವು. ಹೀಗಾಗಿ ಈ ಕರ್ಮವೇ ಶ್ರೇಯಸ್ಸಿಗೆ ಸಾಧನವೆಂದು ತಿಳಿದುಕೊಳ್ಳಬೇಡ. ಹಾಗೆ ತಿಳಿದುಕೊಳ್ಳುವ ಮೂಢರು ಅವಿವೇಕಿಗಳು. ಅಂಥವರು ಸ್ವಲ್ಪಕಾಲದವರೆಗೆ ಸ್ವರ್ಗದಲ್ಲಿ ಇರುತ್ತಾರೆ. ಮತ್ತೆ ಮರ್ತ್ಯಲೋಕಕ್ಕೆ ತಿರುಗಿ ಬರುತ್ತಾರೆ. ಮತ್ತೆ ಹುಟ್ಟು-ಸಾವುಗಳ ಚಕ್ರದಲ್ಲಿ ಸಿಕ್ಕಿಬೀಳುತ್ತಾರೆ. ಅವಿದ್ಯೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಅವರು ತಾವೇ ಧೀರರು, ಪಂಡಿತರು ಎಂದು ತಪ್ಪಾಗಿ ತಿಳಿಯುತ್ತಾರೆ. ಕುರುಡನೊಬ್ಬ ಮತ್ತೊಬ್ಬ ಕುರುಡನಿಗೆ ಮಾರ್ಗದರ್ಶನ ಮಾಡುವಂತೆ, ಅವರು ಇತರರಿಗೆ ಉಪದೇಶಿಸಲು ಪ್ರಯತ್ನಿಸುತ್ತಾರೆ. ಆದರೆ ತಾವೇ ಸಂಸಾರಚಕ್ರದಲ್ಲಿ ಬಿದ್ದು ತೊಳಲಾಡುತ್ತಾರೆ.

''ಇದಕ್ಕೆ ವಿರುದ್ಧವಾಗಿ, ಕುಟುಂಬವನ್ನು ತ್ಯಜಿಸಿ ವಾನಪ್ರಸ್ಥರಾಗಿರುವ ಸದ್ಗೃಹಸ್ಥರು ಉಪಾಸನೆ ಮತ್ತು ಕರ್ಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅವರು ಧ್ಯಾನದ ಮೂಲಕ ತಮ್ಮ ಇಂದ್ರಿಯಗಳನ್ನು ನಿಯಂತ್ರಿಸುತ್ತಾರೆ. ಹೀಗಾಗಿ ಅವರು ತಮ್ಮ ಮನಸ್ಸನ್ನು ಬಹಳ ಶಾಂತವಾಗಿ ಇಟ್ಟುಕೊಂಡಿರುತ್ತಾರೆ; ಭಿಕ್ಷೆಯಿಂದ ತಮ್ಮ ಜೀವನಯಾಪನೆಯನ್ನು ಮಾಡಿಕೊಂಡಿರುತ್ತಾರೆ. ಹೀಗೆ ಕರ್ಮ ಮತ್ತು ಉಪಾಸನೆಗಳನ್ನು ತಮ್ಮ ಜೀವನವಿಧಾನದಲ್ಲಿ ಅಳವಡಿಸಿಕೊಂಡಿರುವ ವಾನಪ್ರಸ್ಥಿಗಳು ತಮ್ಮ ಪುಣ್ಯಪಾಪ ಕರ್ಮಗಳನ್ನು ಸವೆಸಿಕೊಂಡು, ಉತ್ತರಾಯಣ ಮಾರ್ಗದ ಮೂಲಕ ಸಂಸಾರದಲ್ಲಿ ಅತ್ಯಂತ ಶ್ರೇಷ್ಠ ಗತಿಯಾದ ಸತ್ಯಲೋಕವನ್ನು ಅಥವಾ ಹಿರಣ್ಯಗರ್ಭ ಲೋಕವನ್ನು ಹೋಗಿ ಸೇರುತ್ತಾರೆ. ಈ ಸ್ಥಿತಿಯು ಪರಮಾರ್ಥ ಮೋಕ್ಷವಲ್ಲ. ಆದರೆ ಹಿರಣ್ಯಗರ್ಭ ಲೋಕವನ್ನು ತಲುಪಿದವರು ಮತ್ತೆ ಕೆಳಗಿನ ಲೋಕಗಳಿಗೆ ಬರುವುದಿಲ್ಲ. ಕ್ರಮಮುಕ್ತಿಯ ಮೂಲಕ ಅವರು ಮುಕ್ತಿಯನ್ನೇ ಪಡೆಯುತ್ತಾರೆ.''

### ಪರಾವಿದ್ಯೆಯ ಗತಿ ಯಾವುದು?

''ಆದರೆ ಕರ್ಮಸಂನ್ಯಾಸಿಯ ಗತಿಯು ಇನ್ನೂ ಉತ್ತಮವಾದುದು. ಇದೇ ವೇದಾಂತದ ಆದರ್ಶ; ಇದೇ ಉಪನಿಷತ್ತುಗಳ ಧ್ಯೇಯ. ಅಂತಹ ಸಂನ್ಯಾಸಿಯು ಬ್ರಹ್ಮಜ್ಞಾನದಲ್ಲಿ ನಿಷ್ಠನಾಗಿರುವವನು. ಅವನು ಹಿರಣ್ಯಗರ್ಭ ಲೋಕದವರೆಗೂ ಇರುವ ಎಲ್ಲ ಲೋಕಗಳನ್ನೂ ಪರೀಕ್ಷಿಸಿ ನೋಡುತ್ತಾನೆ. ಅವೆಲ್ಲವೂ ಅನಿತ್ಯವಾದ ಕರ್ಮದಿಂದಲೇ ಆಗಿರುವಂಥವು ಎಂದು ಮನನ ಮಾಡಿ ನಿಷ್ಕರ್ಷೆಗೆ ಬರುತ್ತಾನೆ. ಅಶಾಶ್ವತವಾದ ಕರ್ಮಗಳ ಫಲವಾದ ಲೋಕಗಳು ಕೂಡ ಅನಿತ್ಯವಾದುವು ಎಂದು ಅವನು ಮನಗಾಣುತ್ತಾನೆ. ನ ಅಸ್ತಿ, ಅಕೃತಃ ಕೃತೇನ — ಮಾಡಲ್ಪಡದೆ ಇರುವುದು (ಅಶಾಶ್ವತವಾದುದು) ಮಾಡುವುದರಿಂದ (ಕರ್ಮದಿಂದ) ಎಂದಿಗೂ ದೊರಕುವುದಿಲ್ಲ ಎಂಬ ಪರಿಜ್ಞಾನ ಅವನಿಗೆ ಬರುತ್ತದೆ. ಶಾಶ್ವತವಾದುದನ್ನು ತಿಳಿದುಕೊಳ್ಳಬೇಕು ಎಂಬ ಪ್ರಬಲವಾದ ಇಚ್ಛೆ ಅವನಿಗೆ ಉಂಟಾಗುತ್ತದೆ. ಅನಿತ್ಯವಾದ ಸಂಸಾರ ಜೀವಿತವನ್ನು ಅವನು ತ್ಯಾಗ ಮಾಡುತ್ತಾನೆ. ವೈರಾಗ್ಯಮೂರ್ತಿಯಾದ ಅವನು ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳುವುದಕ್ಕಾಗಿ ಗುರುವಿನ ಹತ್ತಿರ ಹೋಗುತ್ತಾನೆ. ಹಾಗೆ ಹೋಗುವಾಗ, ಸಮಿತ್ತುಗಳನ್ನು (ಸಣ್ಣ ಕಟ್ಟಿಗೆಯ ತುಂಡುಗಳು) ಕೈಯಲ್ಲಿ ಹಿಡಿದುಕೊಂಡು ಹೋಗುತ್ತಾನೆ. ಇದು ಅವನ ವಿನಯದ ದ್ಯೋತಕವಾಗಿದೆ. ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೆ ಹೀಗೆ ವಿಧಿಯ ಪ್ರಕಾರ ಅವನು ಬರುತ್ತಾನೆ. ತನ್ನ ವಿನಯ, ಶ್ರದ್ಧೆ ಮತ್ತು ವೈರಾಗ್ಯ ಭಾವನೆಗಳಿಂದ ಅವನು ಗುರುವಿನ ಮನಸ್ಸನ್ನು ಪ್ರಸನ್ನಗೊಳಿಸಿಕೊಳ್ಳುತ್ತಾನೆ. ತದನಂತರ, ಪರತತ್ತ್ವದ ಬಗ್ಗೆ ಅವನನ್ನು ಪ್ರಶ್ನಿಸುತ್ತಾನೆ.

''ಗುರುವು ಅಂಥ ಅರ್ಹತೆಯುಳ್ಳ ಶಿಷ್ಯನಿಗೆ ಉಪದೇಶ ಮಾಡಲೇಬೇಕು. ಹಾಗೆ ಮಾಡುತ್ತಾನೆ, ಕೂಡ. ಏಕೆಂದರೆ ಶಿಷ್ಯನ ಮನಸ್ಸು ಕಾಮ-ಕ್ರೋಧ ರಹಿತವಾಗಿ, ಪ್ರಶಾಂತವಾಗಿರುತ್ತದೆ. ಇಂದ್ರಿಯಗಳನ್ನು ನಿಯಂತ್ರಣ ಮಾಡಿಕೊಂಡಿರುತ್ತಾನೆ. ಅಂಥ ಶಿಷ್ಯನಿಗೆ ಗುರುವು ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಾನೆ. ಮಗೂ, ಬ್ರಹ್ಮವಿದ್ಯೆ ಎಂದರೇನು ತಿಳಿದಿದೆಯೇನು? ಯಾವುದರಿಂದ ಪರ

ಮಾರ್ಥವಾದ, ಚ್ಯುತಿಯಿಲ್ಲದ, ಅಕ್ಷರವಾದ ಬ್ರಹ್ಮತತ್ತ್ವವನ್ನು ತಿಳಿದುಕೊಳ್ಳಬಹುದೋ ಅದೇ ಬ್ರಹ್ಮವಿದ್ಯೆ.

''ಮಗೂ, ಶೌನಕ. ಹಿಂದಿನ ಆಚಾರ್ಯರು ಉಪದೇಶಿಸಿರುವ ಈ ಬ್ರಹ್ಮವಿದ್ಯೆಯನ್ನೇ ನಾನು ನಿನಗೆ ಈಗ ಹೇಳುತ್ತಿದ್ದೇನೆ. ಜಾಗರೂಕತೆಯಿಂದ ಆಲಿಸಿ ತಿಳಿದುಕೋ. ಅಕ್ಷರವೆಂಬ ಮೂಲದಿಂದಲೇ ಇಡೀ ಜಗತ್ತು ಮೈದಳೆಯುವುದು ಎಂದು ನಾನು ಹೇಳುತ್ತಲಿದ್ದೆನಷ್ಟೇ. ಅದರ ರಹಸ್ಯವನ್ನು ಹೇಳುತ್ತೇನೆ ಕೇಳು. ಬೆಂಕಿ ಚೆನ್ನಾಗಿ ಹೊತ್ತಿ ಉರಿಯುತ್ತಿರುವುದನ್ನು ಭಾವಿಸಿಕೋ. ಅದರಿಂದ ಸಾವಿರಾರು ಕಿಡಿಗಳು ಹೊರಹೊಮ್ಮುತ್ತಿರುತ್ತವೆ. ಇದೇ ರೀತಿ, ಅಕ್ಷರ ಅಥವಾ ಬ್ರಹ್ಮನಿಂದ ವಿಧವಿಧವಾದ ದೇಹಗಳನ್ನು ಧರಿಸಿರುವ ಜೀವಿಗಳು ಹುಟ್ಟುತ್ತವೆ. ಕಡೆಗೆ ಅವನಲ್ಲಿಯೇ ವಿಲೀನವಾಗಿ ಹೋಗುತ್ತವೆ. ಆಕಾಶ ಒಂದೇ. ಆದರೆ ಗಡಿಗೆ, ಕುಡಿಕೆ – ಮುಂತಾದ ಉಪಾಧಿಗಳಿಂದ ಚಿಕ್ಕ ಆಕಾಶ, ದೊಡ್ಡ ಆಕಾಶ ಎಂಬಂತೆ ಭೇದಗಳು ಕಾಣಿಸಿಕೊಳ್ಳುತ್ತವೆ, ತಾನೇ. ಇದೇ ರೀತಿ ನಾಮರೂಪಗಳ ವೈವಿಧ್ಯದ ಕಾರಣವಾಗಿ ಬ್ರಹ್ಮವೇ ಅನೇಕ ಜೀವರಾಶಿಗಳಾಗಿ ಕಾಣಿಸಿಕೊಳ್ಳುತ್ತದೆ. ಈ ಭೇದ ನಿಜವಲ್ಲ , ಬರಿಯ ತೋರಿಕೆ ಮಾತ್ರ. ಈ ಅಕ್ಷರನು ಸ್ವಯಂಜ್ಯೋತಿ ಸ್ವರೂಪನು. ಅವನಿಗೆ ಯಾವ ಮೂರ್ತರೂಪವೂ ಇಲ್ಲ. ಏಕೆಂದರೆ ನಾಮರೂಪಗಳ ಉಪಾಧಿ ಅವನಲ್ಲಿ ಇಲ್ಲ. ಹೊರಗೂ ಅವನೇ; ಒಳಗೂ ಅವನೇ. ಎಲ್ಲೆಲ್ಲೂ ಇರುವವನು; ಎಲ್ಲವನ್ನೂ ತುಂಬಿಕೊಂಡವನು. ಹುಟ್ಟಿಲ್ಲ ಅವನಿಗೆ; ಪ್ರಾಣ, ಮನಸ್ಸು ಎಂಬ ವಿಕಾರಗಳ ಸೋಂಕಿಲ್ಲ ಅವನಲ್ಲಿ. ಹೀಗಾಗಿ ಅವನು ನಿಜವಾಗಿಯೂ ಶುಭ್ರನು. ಎಲ್ಲದಕ್ಕೂ ಕಾರಣವಾಗಿರುವವನು, ಉಪಾಧಿಗಳು ಇಲ್ಲದವನು. ಇವನಿಂದಲೇ ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳು, ಆಕಾಶ, ವಾಯು, ಜ್ಯೋತಿ, ನೀರು, ಇವೆಲ್ಲವನ್ನೂ ಧರಿಸಿಕೊಂಡಿರುವ ಪೃಥ್ವಿ— ಇವೆಲ್ಲವೂ ಮೂಡಿಬರುತ್ತವೆ.

''ಮಗೂ, ಅವನು ವಿಶ್ವರೂಪನೂ ಆಗಿದ್ದಾನೆ. ವಿಶ್ವಕ್ಕೆ ಅತೀತವಾದ ನಿರ್ಗಣ ಸ್ವರೂಪನೂ ಆಗಿದ್ದಾನೆ. ಎಲ್ಲ ಜೀವಿಗಳ ಅಂತರ್ಯಾಮಿಯೂ ಆಗಿದ್ದಾನೆ. ವಿಶ್ವರೂಪನಾದ ಅವನಿಗೆ ಅಗ್ನಿಯೇ ಶಿರಸ್ಸು, ಚಂದ್ರಸೂರ್ಯರು ಎರಡು ಕಣ್ಣುಗಳು, ದಿಕ್ಕುಗಳು ಕಿವಿಗಳು. ವಿಸ್ತಾರವಾದ ವೇದಗಳೇ ಅವನ ಮಾತು. ವಾಯುವೇ ಅವನ ಜೀವಪ್ರಾಣ. ಇಡೀ ಪ್ರಪಂಚವೇ ಅವನ ಹೃದಯ. ಭೂಮಿಯೇ ಅವನ ಪಾದಗಳು. ಹೀಗೆ ಪರಮಾತ್ಮನೇ ಈ ಅಖಂಡ ಸೃಷ್ಟಿಯಾಗಿದ್ದಾನೆ ಎಂದು ನಾವು ಧ್ಯಾನಿಸಬೇಕು.

''ಮಗು, ಶೌನಕ. ಈ ಜಗತ್ತೆಲ್ಲವೂ ಅಕ್ಷರದಿಂದಲೇ ಉಂಟಾಗಿದೆ ಎಂದು ನಾನೀಗಾಗಲೇ ನಿನಗೆ ಹಲವುಬಾರಿ ತಿಳಿಸಿಕೊಟ್ಟಿದ್ದೇನೆ. ಇದರ ಮತ್ತಷ್ಟು ವಿವರವನ್ನು ಹೇಳುತ್ತೇನೆ, ಕೇಳು. ಜಗತ್ತಿಗೆ ಮೂಲಭೂತವಾದ ಶಕ್ತಿ-ಬೆಳಕುಗಳನ್ನು ನೀಡುವ ಪಂಚಾಗ್ನಿಗಳೆಲ್ಲವೂ ಅಕ್ಷರನಿಂದಲೇ ಹುಟ್ಟಿಬಂದಿರುವಂಥವು. ಅವು ಯಾವುವು ಗೊತ್ತೆ? ದ್ಯುಲೋಕವನ್ನು ಬೆಳಗುವ ಸೂರ್ಯನೇ ಮೊದಲ ಅಗ್ನಿ. ಅವನಿಂದ ಮೋಡ-ಮಳೆಗಳು ಉಂಟಾಗುತ್ತವೆ. ಮಳೆಯಿಂದಷ್ಟೇ ಅಲ್ಲವೇ ಜೀವಿಗಳಿಗೆ ಆಹಾರವಾದ ದವಸಧಾನ್ಯಗಳು ಬೆಳೆಯುವುದು? ಈ ಆಹಾರದಿಂದ ರೇತಸ್ಸು ಉಂಟಾಗುತ್ತದೆ. ಇದರಿಂದ ಮನುಷ್ಯರ ಸಂತತಿ ಬೆಳೆಯುತ್ತದೆ. ನಾವು ಯಾವ ಜ್ಞಾನರಾಶಿಯನ್ನು ವೇದಗಳೆಂದು ಕರೆಯುತ್ತೇವೆಯೋ, ಅವೆಲ್ಲದರ ಉಗಮ ಅಕ್ಷರ ಬ್ರಹ್ಮವೇ. ಋಗ್ವೇದ, ಯಜುರ್ವೇದ, ಸಾಮವೇದ, ಎಲ್ಲ ಯಜ್ಞಗಳು, ಎಲ್ಲ ಯಾಗಗಳು, ಚಂದ್ರ, ಎಲ್ಲ ಸಂವತ್ಸರಗಳು — ಇವೆಲ್ಲವೂ ಉಂಟಾಗುವುದು ಈ ಅಕ್ಷರ ಬ್ರಹ್ಮನಿಂದಲೇ. ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ಪ್ರಾಣಾಪಾನಗಳು, ಎಲ್ಲ ರೀತಿಯ ಧಾನ್ಯಗಳು, ತಪಸ್ಸು, ಶ್ರದ್ಧೆ, ಸತ್ಯ, ಬ್ರಹ್ಮಚರ್ಯ, ವಿಧಿ — ಇವೆಲ್ಲವೂ ಅಕ್ಷರಬ್ರಹ್ಮನಿಂದಲೇ ಹುಟ್ಟಿರುವುದು. ಏಳು ಪ್ರಾಣಗಳು, ಎಲ್ಲ ವಿಷಯಗಳನ್ನು ಬೆಳಗುವ ಏಳು ಬಗೆಯ ಬೆಳಕುಗಳು, ಏಳು ಸಮಿತ್ತುಗಳು – ಇವೆಲ್ಲವೂ ಬೀಡುಬಿಟ್ಟಿರುವ ಏಳು ಲೋಕಗಳು ಮೂಡಿಬಂದಿರುವುದು ಅಕ್ಷರಬ್ರಹ್ಮನಿಂದಲೇ. ಎಲ್ಲ ಸಮುದ್ರಗಳೂ, ಪರ್ವತಗಳೂ, ಎಲ್ಲ ರೀತಿಯ ನದಿಗಳೂ, ಎಲ್ಲ ಓಷಧಿಗಳೂ, ರಸವೂ ಎಲ್ಲವೂ ಅಕ್ಷರ ಬ್ರಹ್ಮದಿಂದಲೇ ಜನಿಸಿವೆ. ಅವುಗಳ ಅಂತರಾತ್ಮನಾಗಿರುವ ಪರಮಾತ್ಮನೇ ಈ ಅಕ್ಷರಬ್ರಹ್ಮನಾಗಿದ್ದಾನೆ. ಕರ್ಮ, ತಪಸ್ಸು – ಎಲ್ಲವೂ ಅಕ್ಷರ ಬ್ರಹ್ಮವೇ ಆಗಿದೆ. ಎಲ್ಲಕ್ಕೂ ಕಾರಣನಾದ ಪರಮಾತ್ಮನನ್ನು ಅರಿತುಕೊಂಡಾಗ, ಇಡೀ ವಿಶ್ವವೇ ಪರಮಾತ್ಮನು ಎಂಬ ನಿಜವಾದ ಜ್ಞಾನ ಉಂಟಾಗುತ್ತದೆ. ಈ ಪರಮಾತ್ಮನು ಬೇರೆ ಲ್ಲಿಯೂ ಇಲ್ಲ. ಆ ಪರತತ್ತ್ವವು ನಮ್ಮ ಹೃದಯ ಗುಹೆಯಲ್ಲಿಯೇ ವಿರಾಜಮಾನವಾಗಿದೆ. ಪ್ರತಿಯೊಂದು ಜೀವಿಯ ಪ್ರತ್ಯಗಾತ್ಮ ಸ್ವರೂಪನೇ ಆ ಪರಮಾತ್ಮನು. ಆ ಪರಮಾತ್ಮನೇ ಎಲ್ಲ ಜೀವಿಗಳಲ್ಲಿಯೂ ಆತ್ಮಸ್ವರೂಪದಲ್ಲಿ ಇದ್ದಾನೆ. 'ಈ ಪರತತ್ತ್ವವು ನಾನೇ ಆಗಿದ್ದೇನೆ' – ಎಂದು ಯಾವನು ಅರಿತುಕೊಳ್ಳುತ್ತಾನೆಯೋ, ಅಂತಹ ವ್ಯಕ್ತಿಯು ಅವಿದ್ಯೆಯ ಕಟ್ಟನ್ನು ತನ್ನ ಈ ಜೀವಿತದಲ್ಲಿಯೇ ಕಳಚಿಕೊಳ್ಳುತ್ತಾನೆ.

''ಮಗೂ, ಶೌನಕ, ಈ ಪ್ರಪಂಚಕ್ಕೆ ಕಾರಣವಾಗಿರುವ ಪರಮಾತ್ಮನೇ ಇಡಿಯ ವಿಶ್ವರೂಪನೂ ಆಗಿದ್ದಾನೆ. ಅವನೇ ಎಲ್ಲದಕ್ಕೂ ಕಾರಣನಾಗಿದ್ದಾನೆ; ಅವನೇ ಇವೆಲ್ಲವೂ ಆಗಿದ್ದಾನೆ. ಅವನೇ ನಿನ್ನ ಆತ್ಮಸ್ವರೂಪವೂ ಆಗಿದ್ದಾನೆ. ಇದರರ್ಥ ಏನು ಗೊತ್ತೇನು? 'ನೇಹ ನಾನಾಸ್ತಿ ಕಿಂಚನ' – ಈ ವಿಶ್ವವು ಚೈತನ್ಯಮಯವಾಗಿದೆ; ಪರಮಾತ್ಮಮಯವಾಗಿದೆ. ಅದನ್ನು ಬಿಟ್ಟು ಬೇರೆ ಏನೂ ಇಲ್ಲ , ಬೇರೆ ಏನೂ ಇಲ್ಲ.''

ಗುರುವಾದ ಅಂಗಿರಸನು ಇಷ್ಟನ್ನು ಹೇಳಿ, ಧ್ಯಾನಿಸುವರಂತೆ, ಕಣ್ಣುಮುಚ್ಚಿ ಕುಳಿತನು. ಅವನ ಶಿಷ್ಯನಾದ ಶೌನಕನೂ ಧ್ಯಾನಸ್ಥನಾದನು. ಇಬ್ಬರ ಮನಸ್ಸೂ ಇಂದ್ರಿಯಾತೀತವಾಯಿತು; ಪರಮತತ್ತ್ವವಾದ ಅಕ್ಷರದಲ್ಲಿ ಲೀನವಾಯಿತು; ಇಬ್ಬರ ಚೈತನ್ಯವೂ ಏಕೀಭೂತವಾಯಿತು; ಸತ್ಸ್ವರೂಪವಾಯಿತು; ಚಿತ್ಸ್ವರೂಪವಾಯಿತು; ಆನಂದಸ್ವರೂಪವಾಯಿತು. ವಿಶ್ವಾತ್ಮವಾದ ಅಕ್ಷರ ಬ್ರಹ್ಮದಲ್ಲಿ ಲೀನವಾಗಿ ಹೋಯಿತು.